**648 (461) ಶ್ರೀ ಮೋಹನ್ ಪಿ ಸಿ (ಚಿಕ್ಕಪೇಟೆ) – ವೈದ್ಯಕೀಯ ಶಿಕ್ಷಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?**

ಅ) ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಮುಖ್ಯಮಂತ್ರಿಗಳ ಪರಿಹಾರ ನಿಧಿಯ ದುರ್ಬಳಕೆ ಸಹಿತ ವಿವಿಧ ಭ್ರಷ್ಟಾಚಾರ ಎಸಗಿದ್ದಾರೆ ಎಂದು ಪ್ರಾದೇಶಿಕ ನೇತ್ರ ಚಿಕಿತ್ಸಾ ಸಂಸ್ಥೆಯ (ಆರ್ ಐ ಒ) ನಿರ್ದೇಶಕಿ ಸಹಿತ ಐವರು ಸಿಬ್ಬಂದಿ ವಿರುದ್ಧ ಬೆಂಗಳೂರು ವಿಭಾಗದ ಮುಖ್ಯ ಜಾಗೃತಾಧಿಕಾರಿಗಳು ದೋಷಾರೋಪ ಮಾಡಿ ಇವರ ವಿರುದ್ಧ ತನಿಖೆ ನಡೆಸಬೇಕೆಂದು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು ನಿಜವೇ ,

ಆ) ಹಾಗಿದ್ದಲ್ಲಿ, ಈ ಶಿಫಾರಸ್ಸನ್ನು ಎಂದು ಮಾಡಿರುತ್ತಾರೆ, ಶಿಫಾರಸ್ಸಿನ ವಿವರ ನೀಡುವುದು ,

ಇ) ಕೇಂದ್ರ ಸರ್ಕಾರದ ಅಧೀನದಲ್ಲಿರುವ ಪ್ರಾದೇಶಿಕ ನೇತ್ರ ಚಿಕಿತ್ಸಾ ಸಂಸ್ಥೆಯ (ಆರ್ ಐ ಒ) ನಿರ್ದೇಶಕಿ ಮಿಂಟೋ ಆಸ್ಪತ್ರೆ ಮೇಲೆ ಯಾವುದೇ ಅಧಿಕಾರ ಇಲ್ಲದಿದ್ದರೂ ಅವರು ಅಧಿಕಾರ ಚಲಾಯಿಸಿ ಭ್ರಷ್ಟಾಚಾರ ಎಸಗಿರುವುದು ನಿಜವೇ ,

ಈ) ಹಾಗಿದ್ದಲ್ಲಿ, ಇವರ ಮೇಲೆ ಇದುವರೆಗೂ ತೆಗೆದುಕೊಂಡಿರುವ ಕ್ರಮವೇನು ,

ಉ) ಸದರಿ ಆರ್ ಐ ಒ ಅವರು ಈಗ ಯಾವ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ (ವಿವರ ನೀಡುವುದು) ?

**ಶ್ರೀ ವಿ ಎಸ್ ಆಚಾರ್ಯ (ವೈದ್ಯಕೀಯ ಶಿಕ್ಷಣ ಸಚಿವರು) –**

ಅ) ಹೌದು

ಆ) ದಿನಾಂಕ 23–07–2007 – ಪೂರ್ವಭಾವಿ ತನಿಖಾವರದಿಯಲ್ಲಿ ವಿಸ್ತೃತ ತನಿಖೆಗಾಗಿ ಶಿಫಾರಸ್ಸು ಮಾಡಿದ್ದಾರೆ

ಇ) ನಿರ್ದೇಶಕರಿಗೆ ನಿಗಧಿಪಡಿಸಿದ ಅಧಿಕಾರದ ವ್ಯಾಪ್ತಿಯಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ

ಈ) ಸರ್ಕಾರವು ಈ ಬಗ್ಗೆ ಪೂರ್ವಭಾವಿ ವರದಿಯನ್ನು ಪಡೆದಿದ್ದು, ಕೂಲಂಕುಷವಾಗಿ ಪರಿಶೀಲಿಸುತ್ತದೆ

ಉ) ನಿರ್ದೇಶಕರು ಆರ್ ಐ ಒ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ